**ಗಂಡ:** ಇವತ್ತು ಪಾರ್ಟಿಯಲ್ಲಿ ಎಲ್ಲರೂ ನನ್ನನ್ನೇ ನೋಡಬೇಕು ಅದಕ್ಕೆ ಯಾವ ಕೋಟು ಹಾಕಿಕೊಳ್ಳಲಿ.
**ಹೆಂಡತಿ:** ಜೋಕರ್ ಬಟ್ಟೆಗಳನ್ನು ಹಾಕ್ಕೊಂಡು ಹೋಗು. ಖಂಡಿತ ಎಲ್ಲರೂ ನಿನ್ನನ್ನೇ ನೋಡುತ್ತಾರೆ.


**ತಿಮ್ಮ:** ಹೆಂಡತಿ ಅಂದರೆ ನಮ್ಮ ಕಣ್ಣು ಇದ್ದಂತೆ ತಿಳಿತಾ?
**ಗುಂಡ:** ಗೊತ್ತು ಕಣೋ ಒಂದು ಕಣ್ಣು ಇದ್ರೆ ಸರಿಯಾಗಲ್ಲ ಅಂತ ತಾನೇ ನಾನು ಇನ್ನೊಬ್ಬಳನ್ನು ಮದುವೆಯಾಗಿದ್ದು.

**ಮೇಷ್ಟ್ರು:** ಶಸ್ತ್ರಚಿಕಿತ್ಸೆಗೆ ಮೊದಲು ರೋಗಿಗೆ ಪ್ರಜ್ಞೆ ತಪ್ಪಿಸುವುದು ಯಾಕೆ?
**ವಿದ್ಯಾರ್ಥಿ:** ಎಚ್ಚರವಾಗಿದ್ದರೆ ರೋಗಿಯೇ ಶಸ್ತ್ರಚಿಕಿತ್ಸೆ ಕಲಿತಾನು ಎಂಬ ಭಯದಿಂದ.

**ಅಳಿಯ:** ಮಾವ ನೀವು ತುಂಬಾ ಗ್ರೇಟ್, ತುಂಬಾ ಕೂಲ್, ತುಂಬಾ ಕಾಮ್, ತುಂಬಾ ಸಾಫ್ಟ್. ನಿಮ್ಮಂತಹ ಸಹನಶೀಲರನ್ನು ನಾನು ಕಂಡೇ ಇಲ್ಲ.
**ಮಾವ:** ಇದೇನು ಅಳಿಯಂದ್ರೆ ನನ್ನ ಇಷ್ಟು ಹೊಗಳುತ್ತಿದ್ದೀರಿ? ಯಾಕೆ?
**ಅಳಿಯ:** ಹೌದು ಮತ್ತೆ ನಿಮ್ಮ ಮಗಳನ್ನು ಮದುವೆಯಾಗಿ ಇನ್ನೂ ವರ್ಷವಾಗಿಲ್ಲ. ಆಗಲೇ ನನಗೆ ಅವಳ ಕಾಟ ತಡೆದುಕೊಳ್ಳಲು ಆಗುತ್ತಿಲ್ಲ. ಅಂಥದ್ರಲ್ಲಿ ಇಪ್ಪತ್ತೊಂದು ವರ್ಷ ನೀವು ತಡೆದುಕೊಂಡಿದ್ದೀರಲ್ವಾ ನೀವು ಗ್ರೇಟ್! ಅದಕ್ಕೆ ಈ ಹೊಗಳಿಕೆ.





ಕಿಡ್ನಿ, ಲಿವರ್ ಏನು ಬೇಕಾದ್ರೂ ಹೇಳು. ಆದರೆ ಪದೇ ಪದೇ ಹೃದಯದಿಂದ ಹೇಳ್ತೀನಿ, ಹೃದಯದಿಂದ ಪ್ರೀತಿ ಮಾಡ್ತೀನಿ ಅಂತ ಹೇಳಿ ನಂಗೆ ಟೆನ್ಷನ್ ಕೊಡ್ಬೇಡಾ...




ಮಧ್ಯರಾತ್ರಿಯ ವೇಳೆ ಗದ್ದಲಕ್ಕೆ ಎಚ್ಚರವಾದ ಪತಿರಾಯ ಮನೆಯ ಹೊರಗೆ ಬಂದು ವಿಚಾರಿಸಿದ. ನೆರೆ ಮನೆಯಾತ ಯಾರೋ ಕಿಡಿಗೇಡಿಗಳು ಕಾಲೋನಿ ವಾಟರ್ ಟ್ಯಾಂಕ್ ನೀರಿಗೆ ವಿಷ ಬೆರೆಸಿದ್ದಾರೆ ಎಂದ. ಅದನ್ನು ಕೇಳಿ ಪತಿ ಒಳಗೆ ಬಂದ.
**ಪತ್ನಿ:** ಏನಂತೆ ಗದ್ದಲ?
**ಪತಿ:** ಏನಿಲ್ಲ ಪುಂಡ ಪೋಕರಿಗಳ ಜಗಳ. ನೀನು ನೀರು ಕುಡಿದು ಮಲಗಿಕೊ.

**ತಿಮ್ಮ:** ಮೊನ್ನೆ ನೂರು ರೂಪಾಯಿಗೆ ಒಂದು ಫೋನ್ ತಗೊಂಡೆ ಅಂದ್ಯಲ್ಲ, ಯಾವ ಫೋನ್ ಅದು? ನಾನು ತಗೊಬೇಕು.
**ಗುಂಡ:** ಅದಾ ಅದು ಇಯರ್ ಫೋನ್!




**ಗುಂಡ:** ಅಪ್ಪ... ಗಂಡಸು ಅಂದ್ರೇನು?
**ಅಪ್ಪ:** ಗಂಡಸು ಅಂದ್ರೆ ಹುಲಿ ಇದ್ದ ಹಾಗೆ, ಮನೆಲಿ ಅವರು ಹೇಳಿದ್ದೇ ನಡೆಯೋದು.
**ಗುಂಡ:** ನಾನೂ ದೊಡ್ಡವನಾಗಿ ಅಮ್ಮನ ಥರ ಗಂಡಸಾಗ್ತೀನಿ.

ಗುಂಡ ಅಮ್ಮನ ಕೈಲಿ ಪೆಟ್ಟು ತಿಂದು ಅಳುತ್ತ ಅಪ್ಪನ ಬಳಿಗೆ ಹೋಗಿ ಕೇಳಿದ.
**ಗುಂಡ:** ಅಪ್ಪ, ಅಮ್ಮನಿಗೆ ಸರಿಯಾಗಿ ಕಣ್ಣು ಕಾಣುತ್ತಾ?
**ಅಪ್ಪ:** ಯಾಕೋ ಹೀಗೆ ಕೇಳುತ್ತಿದ್ದೀಯ?
**ಗುಂಡ:** ಮತ್ತಿನ್ನೇನು ಅಪ್ಪ, ಅಮ್ಮ ನೀನಂದುಕೊಂಡು ನನ್ನನ್ನು ಸಿಕ್ಕಾಪಟ್ಟೆ ಹೊಡೆದಿದ್ದಾಳೆ.

**ಕಲ್ಲೇಶ:** ಅಣ್ಣಾ ಸಿಗರೇಟ್ ಆ ಕಡೆ ಸೇದು ಇಲ್ಲಿ ಫ್ಯಾಮಿಲಿ ಇದೇ.
**ಮಲ್ಲೇಶ:** ಫ್ಯಾಮಿಲಿ ಇದ್ದರೆ ಏನಾಯ್ತು?
**ಕಲ್ಲೇಶ:** ನನ್ನ ಕಷ್ಟ ಅರ್ಥ ಮಾಡ್ಕೊ. ನನಗೂ ಸೇದಬೇಕು ಅನಿಸುತ್ತೆ ಕಣಣ್ಣೊ.

**ಟೀಚರ್:** ಗುಂಡ ಹೋಂವರ್ಕ್ ಯಾಕೋ ಮಾಡಿಲ್ಲ?
**ಗುಂಡ:** ಟೀಚರ್ ನಾನು ಹಾಸ್ಟೆಲ್‌ನಲ್ಲಿ ಇರುವುದು, ಅದಕ್ಕೆ ಹೋಂವರ್ಕ್ ಮಾಡಿಲ್ಲ. ಹಾಸ್ಟೆಲ್ ವರ್ಕ್ ಅಂತ ನೀವು ಹೇಳಿದ್ರೆ ನಾನು ಮಾಡಿಕೊಂಡು ಬರುತ್ತೇನೆ.

ಸಂಗ್ರಹ: ಶರದ ಕುಲಕರ್ಣಿ, ಬೀದರ್